ಅ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2) ವಿಧೇಯಕ 2003

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3ರವರೆಗೆ

ಅಧ್ಯಕ್ಷರು : "ಖಂಡ 2 ಮತ್ತು 3, ಎರಡೂ ಸೇರಿದಂತೆ ಈ ವಿಧೇಯಕ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2003ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ :2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2003ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಸದನವನ್ನು ಮಧ್ಯಾಹ್ನ 3.15 ರವರೆಗೆ ಮುಂದೂಡುತ್ತಿದ್ದೇನೆ.

(ಸದನವು 2.07ಕ್ಕೆ ಮುಂದೂಡಲ್ಪಟ್ಟು ಪುನಃ 3.15ಕ್ಕೆ ಸೇರಲು ನಿರ್ಧರಿಸಿತು)

4) ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ:

ಬೆಸ್ಕಾಂ ಕಂಪನಿಯವರು ಎಲೆಕ್ಟ್ರಿಕ್ ಮೀಟರ್‌ಗಳನ್ನು ಪರ್ಚೇಸ್ ಮಾಡುವ ಸಲುವಾಗಿ ಟೆಂಡರ್ ಕರೆದಿರುವುದರ ಬಗ್ಗೆ

(ಸದನವು ಪುನಃ ಮಧ್ಯಾಹ್ನ 3–50 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪ ಪೀಠವನ್ನಲಂಕರಿಸಿದ್ದರು)

† ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ಏನು ನಿಲುವಳಿ ಸೂಚನೆಯನ್ನು ತಂದಿದ್ದೇವೆ....

ಅಧ್ಯಕ್ಷರು : ಮೊದಲು ಕ್ವೆಶ್ಚನ್ ಹವರ್ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಅರ್ಜೆನ್ಸಿ ಏನಿದೆ ಅದನ್ನು ನಾವು ಹೇಳುತ್ತೇವೆ. ತಾವು ಬೇಕಾದರೆ ದಿನದ ಚರ್ಚೆಗೆ ಮತ್ತೊಂದು ಸಲ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ತಾವು ಏನು ಹೇಳುತ್ತಿದ್ದೀರಿ ಅದನ್ನು ಪ್ರಶ್ನೋತ್ತರ ವೇಳೆ ಆದಮೇಲೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಏನಿದೆ ಎಂದರೆ ಸರ್ಕಾರ ಬೇಕಾದರೆ ಅದರ ಬಗ್ಗೆ ಚಿಂತನೆ ಮಾಡಲಿ. ಏಕೆಂದರೆ ಇವತ್ತು ಬೆಸ್ಕಾಂನವರು ಆರ್ಡರ್ ಇಶ್ಯೂ ಮಾಡುತ್ತಿದ್ದಾರೆ. 43 ಕೋಟಿ ರೂಪಾಯಿಗೆ ಇದ್ದಂಥ ಟೆಂಡರ್‌ನ್ನು ಇವತ್ತು ಪರ್‌ಚೇಸಸ್‌ನಲ್ಲಿ 56 ಕೋಟಿ ರೂಪಾಯಿಗಳ ಆರ್ಡರ್ ಇಶ್ಯೂ ಮಾಡುತ್ತಿದ್ದಾರೆ. ನಾನು ಹೇಳುವುದೇನೆಂದರೆ, ಸರ್ಕಾರ ಅದರ ಬಗ್ಗೆ ವಿಚಾರ ಮಾಡಿ ಅದನ್ನು ಹೆಲ್ಡ್‌ಅಪ್ ಮಾಡಲಿ. ಇವತ್ತು ಸಾಯಂಕಾಲದೊಳಗೆ ಆರ್ಡರ್ ಇಶ್ಯೂ ಆಗುತ್ತಿದೆ. ಬೆಸ್ಕಾಂ ಕಂಪನಿಯವರು ಎಲೆಕ್ಟ್ರಿಕ್ ಮೋಟ್ರರ್‌ಗಳನ್ನು ಪರ್‌ಚೇಸ್ ಮಾಡುತ್ತಿದ್ದಾರೆ. ಒಟ್ಟು 4,80,000 ಮೋಟರ್‌ಗಳನ್ನು ಪರ್‌ಚೇಸ್ ಮಾಡುತ್ತಿದ್ದಾರೆ. ಆದರೆ ಈ ಮೋಟರ್‌ಗಳನ್ನು ಪರ್‌ಚೇಸ್ ಮಾಡುವಂಥ ಸಂದರ್ಭದಲ್ಲಿ ಅದಕ್ಕೆ ಏನು ಟೆಂಡರ್‌ಗಳನ್ನು ಕರೆದಿದ್ದರು, ಆ ಟೆಂಡರ್‌ನಲ್ಲಿ 17 ದೇಶೀಯ ಅಂದರೆ ಇಂಡಿಯನ್ ಕಂಪನಿಗಳು ಭಾಗವಹಿಸಿದ್ದವು. ಅದರಲ್ಲಿ 5 ವಿದೇಶಿ ಕಂಪನಿಗಳು ಭಾಗವಹಿಸಿದ್ದವು. ಇಲ್ಲಿ ದೇಶೀಯ ಕಂಪನಿಗಳು ಒಂದು ಮೋಟರ್‌ಗೆ 626 ರೂಪಾಯಿಗಳಂತೆ ಕೋಟೆ ಮಾಡಿದ್ದರೆ ಅವರನ್ನು ಪ್ರೀಕ್ವಾಲಿಫಿಕೇಷನ್‌ನಲ್ಲಿ ಡಿಸ್‌ಕ್ವಾಲಿಫೈ ಮಾಡಿದ್ದಾರೆ. ಆದರೆ ವಿದೇಶಿ ಕಂಪನಿಗಳು 897 ರಿಂದ 903 ರೂಪಾಯಿಗಳವರೆಗೆ ಕೋಟ್ ಮಾಡಿದ್ದಾರೆ. ರೂ. 897 ರಂತೆ ಆ ಮೋಟರ್‌ಗಳನ್ನು ಪರ್‌ಚೇಸ್ ಮಾಡುವುದಕ್ಕೆ ಅಗ್ರಿಮೆಂಟ್ ಮಾಡುತ್ತಿದ್ದಾರೆ. ಇವತ್ತು ಬೆಸ್ಕಾಂನವರು ಆರ್ಡರ್ ಇಶ್ಯೂ ಮಾಡುತ್ತಿದ್ದಾರೆ. ಹೀಗಾಗಿ ಇದು ಬಹಳ ಪ್ರಮುಖವಾದಂಥದ್ದು. ಇವತ್ತು ಸಾಯಂಕಾಲ ಆರ್ಡರ್ ಇಶ್ಯೂ ಆಗುವುದಕ್ಕೆ ಎಲ್ಲಾ ತರಾತುರಿಯಿಂದ ನಡೆಯುತ್ತಿದೆ. ಹೀಗಾಗಿ ಇದರಿಂದ ಕೆಪಿಟಿಸಿಎಲ್‌ಗೆ ಸುಮಾರು 13 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಬರ್ಡನ್ ಬೀಳುತ್ತದೆ. ಅದರ ಪರಿಣಾಮವಾಗಿ ಆ ಬರ್ಡನ್ ನಮ್ಮ ಗ್ರಾಹಕರ ಮೇಲೆ ಬೀಳುತ್ತದೆ. ಆದ್ದರಿಂದ ಇದರ ಬಗ್ಗೆ ಡೀಟೈಲ್ ಆಗಿ ಚರ್ಚೆ ಆಗಬೇಕಾಗಿದೆ. ಆದರೆ ಇವತ್ತು ರೂ. 13 ಕೋಟಿ ರೂ.ಗಳಷ್ಟು ದೊಡ್ಡ ಪ್ರಮಾಣದಲ್ಲಿ ಹಣದ ಬರ್ಡನ್ ಬೀಳುವಂಥದ್ದು ಆಗಿದೆ. ಹೀಗಾಗಿ ಇದರಲ್ಲಿ ಯಾರ ಕೈವಾಡ ಇದೆ, ಈ 17 ದೇಶೀಯ ಕಂಪನಿಗಳನ್ನು ಪ್ರೀ ಕ್ವಾಲಿಫಿಕೇಷನ್‌ನಲ್ಲಿ ಡಿಸ್‌ಕ್ವಾಲಿಫೈ ಮಾಡುವಂಥದ್ದಾದರೆ ಮುಂದೆ ನಮ್ಮ ರಾಜ್ಯದಲ್ಲಿ ಇರುವಂಥದ್ದು ಇರಬಹುದು.

Mr. Speaker : ಈಗ ತಾವು ಬ್ರೀಫ್ ಆಗಿ ಹೇಳಿದ್ದೀರಿ Leave it to me. No, I will consider on merits Whether it should be admitted through Adjournment Motion or some other form.

ಶ್ರೀ ಜಗದೀಶ್ ಶೆಟ್ಟರ್ : ಅಡ್ಮಿಟೆಡ್ ಸಲುವಾಗಿಯೇ ನಾನು ಪ್ರಿಲಿಮಿನರಿ ಸಬ್‌ಮಿಶನ್ ಮಾಡುತ್ತಿದ್ದೇನೆ.

ಅಧ್ಯಕ್ಷರು : ಅದು ಆಗಲೇ ಆಯಿತಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ : ಇನ್ನೂ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಸಬ್ಜೆಕ್ಟನ್ನು ಅಡ್ಮಿಟ್ ಮಾಡಿದ ಮೇಲೆ ವಿಷಯದ ಬಗ್ಗೆ ಪೂರ್ತಿಯಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳುವಂಥದ್ದು ಇವತ್ತು ಏನಾಗಿದೆ ಎಂದರೆ ಇವತ್ತು ಆ ಬೆಸ್ಕಾಂನವರು ಆರ್ಡರ್ ಅನ್ನು ಇಶ್ಯೂ ಮಾಡುತ್ತಿದ್ದಾರೆ. ಇದೇ ಬೆಸ್ಕಾಂ ಕಂಪನಿಯವರು ಕೆಲವು ದಿವಸಗಳ ಹಿಂದೆ ಅಂದರೆ ಜೂನ್ 18 ತಾರೀಖಿಗೆ ನಮ್ಮ ಇಂಡಿಯನ್ ಕಂಪನಿಯಿಂದ ಒಂದು ಮೋಟರ್‌ಗೆ 626 ರೂಪಾಯಿಗಳಂತೆ....

ಅಧ್ಯಕ್ಷರು : ವಿಷಯವನ್ನು ಪೂರ್ತಿ ಹೇಳುತ್ತಿದ್ದೀರಿ. ತಾವು ಏನು ಹೇಳುತ್ತಿದ್ದೀರಿ ಅದು ನನಗೆ ಅರ್ಥವಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಜೂನ್ ತಿಂಗಳಲ್ಲಿ ಇಂಡಿಯನ್ ಕಂಪನಿಯಿಂದ ಈಗಾಗಲೇ ಪರ್‌ಚೇಸ್ ಮಾಡಿದ್ದಾರೆ. ಮನಃ ಈಗ ಜುಲೈ ತಿಂಗಳಿನಲ್ಲಿ ವಿದೇಶಿ ಕಂಪನಿಗೆ ಅವರು ಮೋಟರ್‌ಗೆ ರೂ. 900 ನಂತೆ ಕೊಟ್ಟು ಪರ್‌ಚೇಸ್ ಮಾಡುತ್ತಾರೆಂದರೆ ಇದರ ಅರ್ಥ ಏನು? ಹಿರಿಯ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ. ಇಲ್ಲಿ 13 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ನಡೆಯುವುದಿದೆ. ರೂ. 13 ಕೋಟಿ ರೂ.ಗಳಷ್ಟು ಬರ್ಡನ್ ನಮ್ಮ ಕೆಪಿಟಿಸಿಎಲ್‌ಗೆ ಬೆಸ್ಕಾಂಗೆ ಆಗುತ್ತಿದೆ. ಹೀಗಾಗಿ ಇದರಲ್ಲಿ ದೊಡ್ಡವಾದಂಥ ವ್ಯವಹಾರಗಳು ನಡೆಯುತ್ತಿದೆ. ಇದೊಂದು ದೊಡ್ಡ ಅವ್ಯವಹಾರದ ಕಂತೆಯಾಗಿದೆ. ಇವತ್ತು ಬೆಳಿಗ್ಗೆ ಏನಾದರೂ ಸ್ಪೆಷಿಫಿಕ್ ಕೇಸ್ ಕೊಡಿ ಎಂದು ಶ್ರೀ ದೇಶಪಾಂಡೆಯವರು ಹೇಳುತ್ತಿದ್ದರು. ಈಗ ಸ್ಪೆಸಿಫಿಕ್ ಕೇಸ್ ಕೊಡುತ್ತಿದ್ದೇನೆ. ದೇಶೀಯ ಕಂಪನಿಗಳು ರೂ. 626ರಂತೆ ಮೋಟರ್ ಒಂದಕ್ಕೆ ಕೊಡುವುದಕ್ಕೆ ತಯಾರಿದ್ದಾರೆ. ಜೂನ್ ತಿಂಗಳಿನಲ್ಲಿ ಮೋಟರ್ ಒಂದಕ್ಕೆ ರೂ. 626 ರಂತೆ ಟೆಂಡರ್ ಮೂಲಕ ಪರ್‌ಚೇಸ್ ಮಾಡಿದ್ದಾರೆ. ಆದರೆ ಇವತ್ತು ಆ ಇಂಡಿಯನ್ ಕಂಪನಿಗಳನ್ನೆಲ್ಲಾ ಪ್ರಿ-ಕ್ವಾಲಿಫಿಕೇಷನ್‌ನಲ್ಲಿ ಔಟ್ ಮಾಡಿದ್ದಾರೆ. ಅದಕ್ಕೋಸ್ಕರ ಇದರಲ್ಲಿ ನಾವು ಹೇಳುವಂಥದ್ದು ಏನೆಂದರೆ....

ಅಧ್ಯಕ್ಷರು : ಆಯಿತು, ಹೇಳಿದರಲ್ಲಾ. ನನಗೆ ಅರ್ಥವಾಗಿದೆ. You please give me some more time. Whether it should be admitted through Adjournment Motion or through some other form, I will give my ruling.

ಶ್ರೀ ಎಸ್. ಸುರೇಶ್ ಕುಮಾರ್ : ಡಿಸ್‌ಕಶನ್‌ಗೆ ನೀವು ಈ ಫಾರಂನಲ್ಲಿ, ಬೇರೆ ಫಾರಂನಲ್ಲಿ ಕೊಡುವುದು ಅದು ಬೇರೆ ಪ್ರಶ್ನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿರಿಯ ಸಚಿವರಾಗಿದ್ದು ಅವರು ಸದನದಲ್ಲಿ ಕುಳಿತಿದ್ದಾರೆ. ಇವಾಗ ಈ ಸಬ್ಜೆಕ್ಟ್ ಸಭೆಯ ಮುಂದೆ ಬಂದಿದೆ. ಸಂಜೆ ಒಳಗಡೆ ಆ ಆರ್ಡರನ್ನು ಕೊಟ್ಟುಬಿಟ್ಟರೆ ನಮ್ಮ whole discussion will be defeated ನಾವು ಇಲ್ಲಿ ಯಾವ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ ಅದು ಸೋತುಹೋಗಿಬಿಡುತ್ತದೆ. ಅದು ರಿವ್ಯೂ ಆಗುವುದಿಲ್ಲ. ಅದಕ್ಕೋಸ್ಕರ ನಾವು ತಮ್ಮ ಮೂಲಕ ಹಿರಿಯ ಸಚಿವರನ್ನು ಕೇಳಿ ಕೊಳ್ಳುವುದು...

ಅಧ್ಯಕ್ಷರು : ನೋಡಿ ಸ್ವಾಮಿ, ನಾವು ಇದಕ್ಕೆ ಇಂಧನ ಮಂತ್ರಿಗಳನ್ನು ಕರೆಸೋಣ.

ಶ್ರೀ ಸುರೇಶ್ ಕುಮಾರ್ : ಓ.ಕೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಏನೂ ಹೇಳುವುದಿಲ್ಲ. ಬೆಳಿಗ್ಗೆ ನಮ್ಮ ಸನ್ಮಾನ್ಯ ನಾಯಕರು ಮಾತನಾಡುತ್ತಿದ್ದಾಗ ತಮ್ಮ ಹತ್ತಿರಕ್ಕೆ ಅಡ್ಜಾರ್ನ್‌ಮೆಂಟ್ ಮೋಷನ್...

ಅಧ್ಯಕ್ಷರು : ನೋ, ಅದು ಜೀರೋ ಹವರ್‌ನಲ್ಲಿ

ಶ್ರೀ ಎ. ರಾಮದಾಸ್ : ನಾನು ಬೇರೆ ಏನೂ ಹೇಳುತ್ತಿಲ್ಲ. ನಾನು ಹೇಳುವವರೆಗೆ ಅಲೋ ಮಾಡಿ ಸರ್.

ಅಧ್ಯಕ್ಷರು : ಈ ಸಬ್ಜೆಕ್ಟ್ ಮ್ಯಾಟರ್ ಏನ್ರೀ,

ಶ್ರೀ ಎ. ರಾಮದಾಸ್ : ಹೌದು, ಅದೇನೇ.

ಅಧ್ಯಕ್ಷರು : ಹಾಗಾದರೆ ಹೇಳಿ. ನಾನು ಬೇರೆ ಏನೋ ಸಬ್ಜೆಕ್ಟ್ ರೈಸ್ ಮಾಡುತ್ತಿದ್ದೀರಿ ಎಂದು ತಿಳಿದುಕೊಂಡೆ.

ಶ್ರೀ ಎ. ರಾಮದಾಸ್ : ಬೆಳಿಗ್ಗೆ ಇವರು ತಮ್ಮಲ್ಲಿಗೆ ಮೂವ್ ಮಾಡಿದರಲ್ಲಾ, ಮೂವ್ ಮಾಡಿದ ಮೇಲೆ ಅಡ್ಜರ್ನ್‌ಮೆಂಟ್ ಮೋಷನ್ ಅಥವಾ ಯಾವ ಮೋಶನ್ ಆದರೂ ತೆಗೆದುಕೊಳ್ಳಿ. ಅದರ ಬಗ್ಗೆ ನಾನು ಹೇಳುತ್ತಿಲ್ಲ. ಬೆಳಿಗ್ಗೆ ಚರ್ಚೆ ಆದಮೇಲೆ ಈ ಇಶ್ಯೂ ಇಂಪಾರ್ಟೆಂಟ್ ಆಗಿದ್ದು ಬೆಳಿಗ್ಗೆಯೇ ಚರ್ಚೆಗೆ ತೆಗೆದುಕೊಳ್ಳಿ ಎಂದು ಏಕೆ ಹೇಳಿದ್ದಾರೆಂದರೆ, 4 ವಿದೇಶಿ ಕಂಪನಿಗಳಿಗೆ ಆರ್ಡರ್ ಕೊಡಬೇಕೆಂದು ಬೆಸ್ಕಾಂನವರು ಹೊರಟಿದ್ದರಲ್ಲಾ, ಬೆಳಿಗ್ಗೆ ತಮ್ಮ ಹತ್ತಿರ, ಈ ವಿಷಯ ಬಂದ ನಂತರದಲ್ಲಿ ಈಗ ಒಂದು ಕಂಪನಿಗೆ ಆಗಲೇ ಆರ್ಡರ್ ಕೊಟ್ಟಾಯಿತು. ಆ ಆರ್ಡರ್‌ನ ಕಾಪಿ ನನ್ನ ಹತ್ತಿರ ಇದೆ. ಟಿಟಿಎಲ್ ಕಂಪನಿಗೆ ಈಗಾಗಲೇ ಆರ್ಡರ್ ಅನ್ನು ಇಶ್ಯೂ ಮಾಡಿಬಿಟ್ಟರು. ಉಳಿದಂಥ ಮೂರು ಕಂಪನಿಗಳಿಗೆ ಇವತ್ತು ಸಾಯಂಕಾಲ ಆರ್ಡರ್ ಇಶ್ಯೂ ಆಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಈಗ ತಾವು ಡಿಸ್‌ಕಶನ್‌ಗೆ ಅವಕಾಶ ಮಾಡಿಕೊಡದಿದ್ದರೆ ಸಂಜೆಯೊಳಗೆ ಆರ್ಡರ್ ಇಶ್ಯೂ ಆಗಿಬಿಡುತ್ತದೆ.

ಅಧ್ಯಕ್ಷರು : ಡೀಟೈಲ್ಸ್ ಈಗ ಬೇಡ. I don't want any details at this stage. Still, it is not admitted fully, Just I am hearing.

ಶ್ರೀ ಎ. ರಾಮದಾಸ್ : ಹಾಗಾದರೆ ಕೊಡಬೇಡಿ ಎಂದು ಸರ್ಕಾರದಿಂದ ಆರ್ಡರ್ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಇಂಧನ ಮಂತ್ರಿಗಳನ್ನು ಕರೆಸಿ.... ಅವರು ಸ್ಪೆಸಿಫಿಕ್ ಆಗಿ ಹೇಳಲಿ. ಪ್ರಶ್ನೋತ್ತರಗಳು ಆದಮೇಲೆ ಅವರು ಅದರ ಬಗ್ಗೆ ಸ್ಪೆಸಿಫಿಕ್ ಆಗಿ ಹೇಳಲಿ. ಇವತ್ತು ನಾನು ಹೆಲ್ಡ್‌ಅಪ್ ಮಾಡುತ್ತೇನೆಂದು ಹೇಳಲಿ. ನೀವು ಚರ್ಚೆಗೆ ಸಮಯ ಕೊಡಿ. ಇದರಲ್ಲಿ 13 ಕೋಟಿ ರೂ. ಡೀಲ್ ಇದೆ. ನೀವು ಏನು ಏನು ಎನ್ನುತ್ತಿದ್ದೀರಲ್ಲಾ?

ಅಧ್ಯಕ್ಷರು : ಅವರು ಹೇಳಿಯಾಗಿದೆ I have not yet admitted.

ಶ್ರೀ ಜಗದೀಶ್ ಶೆಟ್ಟರ್ : ತಾವು ಇಂಧನ ಮಂತ್ರಿಯವರನ್ನು ಕರೆಸಿ, ಈ ಮ್ಯಾಟರ್ ಬಹಳ ಸೀರಿಯನ್ ಆಗಿದೆ. 43 ಕೋಟಿ ರೂಪಾಯಿಯದ್ದು ಟೆಂಡರ್‌ನಲ್ಲಿ ಭಾಗವಹಿಸಿದ್ದರೂ ಕೊಟ್ಟಿಲ್ಲ. ನೀವು 56 ಕೋಟಿ ರೂ. ಇದ್ದವರಿಗೆ ಫಾರಿನ್ ಕಂಪನಿಯವರಿಗೆ ಕೊಡುತ್ತಿದ್ದೀರಿ. ಈ ವಿದೇಶಿ ಕಂಪನಿಗಳ ಬಗ್ಗೆ ಏಕೆ ವ್ಯಾಮೋಹ ಬರುತ್ತಿದೆಯೋ ಗೊತ್ತಿಲ್ಲ. ನಮ್ಮ ಇಂಡಿಯನ್ ಕಂಪನಿಯನ್ನೆಲ್ಲಾ ಹಾಳು ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ ವಿಚಾರ ಮಾಡೋಣವೆಂದು ತಾವು ಹೇಳಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ : ಪ್ರಶ್ನೋತ್ತರ ವೇಳೆ ಆದಮೇಲೆ ನಾನು ಮತ್ತೆ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಅರ್ಧ ಗಂಟೆಯೊಳಗೆ..... ಅಕಸ್ಮಾತ್ ಹತ್ತು ನಿಮಿಷದಲ್ಲಿ ಮುಗಿದು ಹೋದರೆ ಅಷ್ಟರಲ್ಲಿ ಕರೆಸಲು ಆಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : ಪ್ರಶ್ನೋತ್ತರ ಆದಮೇಲೆ ಅಡ್‌ಜರ್ನ್‌ಮೆಂಟ್ ಮೋಷನ್ ಬಗ್ಗೆಯೂ ನಾವು ಡೀಟೇಲ್ ಆಗಿ ಚರ್ಚೆ ಮಾಡುತ್ತೇವೆ.

Mr. Speaker : No. No. I will give my ruling. Afterwards you can discuss.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಉತ್ತರವನ್ನು ಕೊಡಲು ಕರೆಸೋಣ. ಆದರೆ, ವಿದೇಶಿ ಕಂಪನಿಗಳ ಬಗ್ಗೆ ನಮಗೆ ಜಾಸ್ತಿ ಮೋಹವಿಲ್ಲ. ತಮಗೇ ಅದರ ಬಗ್ಗೆ ಮೋಹ ಜಾಸ್ತಿ. ಏಕೆಂದರೆ, ಮೊದಲಿನಿಂದಲೂ ಈ ದೇಶದ socialistic pattern of society ತರಬೇಕು ಎಂದು ಎಷ್ಟೇ ಪ್ರಯತ್ನವನ್ನು ನೆಹರೂಜಿರವರು ಮಾಡಿದರೂ ಕೂಡ, ಅದಕ್ಕೆ ಇಂದಿರಾಗಾಂಧಿಯವರು ಪ್ರೋತ್ಸಾಹ ಕೊಟ್ಟರೂ ಕೂಡ, ಮುಂದೆ ಆ ಪಾಲಿಸಿಯನ್ನು ಕ್ರಿಟಿಸೈಸ್ ಮಾಡಿ ಹೊರದೇಶದ ಕಂಪನಿಗಳು ಬರಬೇಕು, ಲಿಬ್ರಲೈಜೇಷನ್ ಆಗಬೇಕು ಎನ್ನುವುದಕ್ಕೆ ಹೆಚ್ಚಿನ ಉತ್ತೇಜನ ಕೊಟ್ಟವರು ನೀವು. ಆದ್ದರಿಂದ, ಕೇವಲ ನಾವುಗಳೇ ಹೊರದೇಶದ ಕಂಪನಿಗಳಿಗೆ ಉತ್ತೇಜನ ಕೊಡುತ್ತಿದ್ದೇವೆಂಬುದಲ್ಲ. ನಿಮ್ಮ ಮತ್ತು ನಿಮ್ಮ ಪಕ್ಷದ ಪಾಲಿಸಿ ಹೆಚ್ಚು ಕಡಿಮೆ ಹೊರಗಿನ ಕಂಪನಿಗಳಿಗೇ ಹೆಚ್ಚಿನ ಮಹತ್ವವನ್ನು ಕೊಟ್ಟುಕೊಂಡು ಹೋಗಿದ್ದೀರಿ. ಆದರೆ ಅದನ್ನು ಈಗ ರಿಯಲೈಸ್ ಮಾಡುತ್ತಿದ್ದೀರಿ. ಯಾವಾಗ ಇಲ್ಲಿ ಸ್ಥಳೀಯವಾಗಿ ಸಣ್ಣಪುಟ್ಟ ಕಂಪನಿಗಳು ಕ್ಲೋಜ್ ಆಗುತ್ತಿದೆ, Small Scale Industries ಕ್ಲೋಜ್ ಆಗುತ್ತಿದೆ ಆಗ ಕಣ್ಣು ತೆರೆದು ಇದರಲ್ಲಿ ತಪ್ಪಾಗುತ್ತಿದೆ ಎಂದು ಮನವರಿಕೆಯಾಗಿದೆ.

ಗೊಂದಲ

ಅಧ್ಯಕ್ಷರು : ಮಂತ್ರಿಗಳು ಮಾತನಾಡುವಾಗ ತಾವೇಕೆ ಮಧ್ಯೆದಲ್ಲಿ ಮಾತನಾಡುತ್ತೀರಿ? I cannot understand.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪಬ್ಲಿಕ್ ಸೆಕ್ಟಾರ್‌ಗಳಿಗೆ ಪಬ್ಲಿಕ್ ಇನ್‌ವೆಸ್ಟ್‌ಮೆಂಟ್ ಮಾಡಿ ಉತ್ತೇಜನ ಕೊಟ್ಟವರೇ ಕಾಂಗ್ರೆಸ್ ಪಕ್ಷದವರು ಮತ್ತು ಕಾಂಗ್ರೆಸ್ ಸರ್ಕಾರ. ಇವರಲ್ಲಿ ಒಬ್ಬರು ಡಿಸ್-ಇನ್‌ವೆಸ್ಟ್‌ಮೆಂಟ್ ಮಂತ್ರಿಗಳೇ ಬಂದರು. ಪಬ್ಲಿಕ್ ಸೆಕ್ಟಾರ್‌ಗಳನ್ನೆಲ್ಲಾ ಮಾರಿಕೊಂಡು ಹೋಗಿ ಎಂದು, ಇದನ್ನು ಸುಧಾರಣೆ ಮಾಡತಕ್ಕದಲ್ಲ, ಕೇಂದ್ರ ಸರ್ಕಾರ ಮಾಡಿದ ಮೇಲೆ ಆಟೋಮ್ಯಾಟಿಕಲಿ ಅದರ ಪ್ರಭಾವ ನಮಗೂ ಬೀರುತ್ತದೆ. ನೆರೆಮನೆಗೆ ಬೆಂಕಿ ಹತ್ತಿದಾಗ ಅದರ ಬಿಸಿ ನಮಗೂ ಬರುವುದಿಲ್ಲವೆ? ಹಾಗೆ ನಿಮಗೆ ಬೆಂಕಿ ಹತ್ತಿದಾಗ ಅದರ ಬಿಸಿ ನಮಗೂ ಬಡಿದಿದೆ. ಈ ದೇಶದಲ್ಲಿ ಕೆಲವು ಜನ ಸೇರಿಕೊಂಡು ಒಂದು ವಾತಾವರಣ ಸೃಷ್ಟಿ ಮಾಡಿದರು. Disinvestment, Public Sectors ಬೇಡ ಎಂದು. Local Industry ಗಳಿಗೆ encouragement ಕೊಡತಕ್ಕದ್ದು more or less ಎಲ್ಲಾ ರಾಜ್ಯಗಳು, ಕೇಂದ್ರ ಸರ್ಕಾರ ಕೂಡ ಮುತುವರ್ಜಿ ವಹಿಸಿದ್ದರು. ಇಷ್ಟು ಮುತುವರ್ಜಿಯನ್ನು ಬಹುಶಃ ಅಭಿವೃದ್ಧಿ ಕೆಲಸಗಳಲ್ಲಿ ವಹಿಸಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ : ನಾವು ವಿಷಯದ ಬಗ್ಗೆ ಮಾತನಾಡಿದರೆ.....

ಅಧ್ಯಕ್ಷರು : ನಾನು ರೂಲಿಂಗ್ ಕೊಡುತ್ತೇನೆ. I will give my ruling. ವಿದೇಶಿ ಎಂದು ಹೇಳಿದ್ದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ. ನೀವು ಅದರ ಬಗ್ಗೆ ಏನೂ ಹೇಳದಿದ್ದರೆ ಅದು ಬೇರೆ ವಿಷಯ.

ಶ್ರೀ ಜಗದೀಶ್ ಶೆಟ್ಟರ್ : ವಿದೇಶಿ ಕಂಪನಿಗೆ ಈ ಟೆಂಡರ್‌ನಲ್ಲಿ ಭಾಗವಹಿಸಲು ಕೊಟ್ಟಿದ್ದೀರೆಂದು ನಾವು ಹೇಳುತ್ತಿದ್ದೇವೆ. ನಮ್ಮ ಕಂಪನಿಗಳನ್ನು ಬಿಟ್ಟಿದ್ದೀರಿ. ಅದನ್ನು ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು : ಇದರ ಬಗ್ಗೆ ನಾನು ರೂಲಿಂಗ್ ಕೊಟ್ಟಮೇಲೆ ತಾವು ಮಾತನಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ವಿದೇಶಿ ಕಂಪನಿಯ ಬಗ್ಗೆ ನಮಗೆ ಮೋಹವಿಲ್ಲ. ಏಕೆಂದರೆ ನಮ್ಮ ಅಖಿಲ ಭಾರತ ಅಧ್ಯಕ್ಷರು ಸ್ವದೇಶಿ!

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸ್ವದೇಶಿನೋ, ಪರದೇಶಿನೋ ನಾನು ಏನೂ ಅದರ ಬಗ್ಗೆ ಹೇಳಲೇ ಇಲ್ಲವಲ್ಲಾ?

ಅಧ್ಯಕ್ಷರು : ಈಗ ಪ್ರಶ್ನೋತ್ತರಗಳು.

5) ಪ್ರಶ್ನೋತ್ತರಗಳು

6) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶಿವಾಜಿನಗರ ಕ್ಷೇತ್ರದಲ್ಲಿ ಹೊಸದಾಗಿ ಆಯುರ್ವೇದ ಯುನಾನಿ ಚಿಕಿತ್ಸಾಲಯಗಳನ್ನು ತೆರೆಯುವ ಬಗ್ಗೆ

522 (4536) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಆಯುರ್ವೇದ ಯುನಾನಿ ಚಿಕಿತ್ಸಾಲಯಗಳೆಷ್ಟು;

ಆ) ಈ ಕ್ಷೇತ್ರದಲ್ಲಿ ಹೊಸದಾಗಿ ಆಯುರ್ವೇದ ಹಾಗೂ ಯುನಾನಿ ಚಿಕಿತ್ಸಾಲಯಗಳನ್ನು ತೆರೆಯಲು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2003-04ನೇ ಸಾಲಿನಲ್ಲಿ ಹೊಸದಾಗಿ ಈ ಕ್ಷೇತ್ರದಲ್ಲಿ ಆಯುರ್ವೇದ ಯುನಾನಿ ಚಿಕಿತ್ಸಾಲಯಗಳನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು):

ಅ) ಒಂದು (ಆಯುರ್ವೇದ ಚಿಕಿತ್ಸಾಲಯ) ಒಂದು ಯುನಾನಿ ಔಷಧಾಲಯ (ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿದೆ)

ಆ) ಇಲ್ಲ

ಇ) ಶಿವಾಜಿನಗರ ವಿಧಾನಸಭಾ ಕ್ಷೇತ್ರ ನಗರ ಪ್ರದೇಶದಲ್ಲಿರುವುದರಿಂದ, ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಆಯುರ್ವೇದ ಮತ್ತು ಯುನಾನಿ ಚಿಕಿತ್ಸಾಲಯಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಬಹುದು.